


ತಂದೆ: ಪುಟ್ಟ, ಏಕೆ ಅಳ್ತಾ ಇದ್ದೀಯಾ..
ಪುಟ್ಟ: ನನಗೆ ನೂರು ರೂಪಾಯಿ ಕೊಟ್ಟರೆ ಮಾತ್ರ ಹೇಳುವೆ.
ತಂದೆ: ತಗೋ ಈ ನೂರು ರೂಪಾಯಿ. ಈಗ ಹೇಳು ಏಕೆ ಅಳುತ್ತಿರುವೆ.
ಪುಟ್ಟ: ಇದಕ್ಕಾಗಿಯೇ!

---

ಹೆಂಡತಿ: ಅಡುಗೆ ಮಾಡುವವಳನ್ನು ಕೆಲಸದಿಂದ ತೆಗೆದು ಹಾಕಿ, ನಾನೇ ಅಡುಗೆ ಮಾಡಲು ಶುರು ಮಾಡಿದರೆ, ನೀವು ನನಗೇನು ಕೊಡುತ್ತೀರಿ?
ಗಂಡ: ನಾನೇನು ಕೊಡಲಿ. ನೀನು ಹಾಗೇನಾದರೂ ಮಾಡಿದರೆ ನನ್ನ ಜೀವ ವಿಮಾದ ಪೂರ್ಣಹಣ ಬೇಗನೇ ನಿನ್ನ ಕೈಸೇರುತ್ತದೆ.

60 ವರ್ಷದ ಒಬ್ಬ ವೃದ್ಧ 16 ವರ್ಷದ ಒಬ್ಬ ಹುಡುಗಿಯನ್ನು ಮದುವೆಯಾಗುವುದೆಂದರೆ ಓದಲು ಬಾರದ ವ್ಯಕ್ತಿಯೊಬ್ಬ ಪುಸ್ತಕ ಖರೀದಿಸಿದಂತೆ. ಆ ಪುಸ್ತಕಗಳು ಅವನ ಗೆಳೆಯರಿಗೆ ಮಾತ್ರ ಉಪಯೋಗವಾಗುತ್ತವೆ.

ಅಪ್ಪ: ಇದೇನೋ... ಪರೀಕ್ಷೆಯಲ್ಲಿ ಇಷ್ಟೊಂದು ಕಡಿಮೆ ಮಾರ್ಕ್ಸ್ ತಗೊಂಡು ಫೇಲ್ ಆಗಿದ್ದೀಯ?
ಮಗ: ಆ್ಯಬ್ಸೆಂಟ್ ಡ್ಯಾಡಿ..
ಅಪ್ಪ: ಏನು ಆ್ಯಬ್ಸೆಂಟು? ಅವತ್ತು ಪರೀಕ್ಷೆ ದಿವ್ಸ ನಾನೇ ನಿನ್ನನ್ನು ಸ್ಕೂಟರ್‌ನಲ್ಲಿ ಕರಕೊಂಡು ಹೋಗಿ ಪರೀಕ್ಷೆ ಹಾಲ್‌ಗೆ ಬಿಟ್ಟು ಬಂದಿದ್ದೀನಿ!
ಮಗ: ನಾನಲ್ಲ.. ಡ್ಯಾಡಿ. ಪರೀಕ್ಷೆ ಹಾಲ್‌ನಲ್ಲಿ ನನ್ನ ಪಕ್ಕ ಕೂರೋ ರ್‍ಯಾಂಕ್ ಸ್ಟೂಡೆಂಟ್ ದಿಲೀಪ ಜ್ವರ ಬಂದು ಆ್ಯಬ್ಸೆಂಟ್ ಆಗಿದ್ದ. ಅದಕ್ಕೇ ನನಗೆ ಕಡಿಮೆ ಮಾರ್ಕ್ ಬಂತು!

★★★

ಟೀಚರ್: ಬಂಟೀ.. ನೀನು ಬಲ್ಲೀ ಬರೆದ ಉತ್ತರಗಳನ್ನೇ ಕಾಪಿ ಮಾಡಿದ್ದೀಯ?
ಬಂಟೀ: ಅಷ್ಟೊಂದು ಕರೆಕ್ಟಾಗಿ ಹೇಗೆ ಹೇಳ್ತೀರಿ ಮೇಡಂ..
ಟೀಚರ್: ಇಲ್ನೋಡು.. ಬಲ್ಲೀ 'ನನಗೆ ಗೊತ್ತಿಲ್ಲ' ಎಂದು ಉತ್ತರ ಬರೆದ ಪ್ರಶ್ನೆಗೆ ನೀನು 'ನನಗೂ ಅಷ್ಟೇಯ..' ಎಂದು ಬರೆದಿದ್ದೀಯ!

ಸಂಗ್ರಹ: ಎಸ್.ನವನೀತ್‌ಗೌಡ, ಮಂಡ್ಯ

ವಿಮಾನದಲ್ಲಿ ಕುಳಿತಿದ್ದ ಮಂಟಾಸಿಂಗ್‌ಗೆ ಗಗನಸಖಿ ಕೇಳಿದಳು: ರಮ್ ತಗೋತೀರಾ ಸರ್?
ಹೌದು, ತಂದುಕೊಡಿ – ಅಂದ ಮಂಟಾಸಿಂಗ್.
ಪಕ್ಕದ ಸೀಟ್‌ನಲ್ಲಿ ಕುಳಿತಿದ್ದ ಪುರೋಹಿತರಿಗೂ ಗಗನಸಖಿ ಅದೇ ಪ್ರಶ್ನೆ ಕೇಳಿದಳು.
ಮುಖ ಸಿಂಡರಿಸಿದ ಪುರೋಹಿತರು, 'ಅದನ್ನು ಕುಡಿಯುವುದಕ್ಕಿಂತ ಐದಾರು ಹುಡುಗಿಯರ ಸಂಗ ಮಾಡುವುದು ಲೇಸು' ಎಂದರು.
ತಕ್ಷಣ ಮಂಟಾಸಿಂಗ್ ಹೇಳಿದ– 'ಹೌದಾ..! ಹಾಗಿದ್ದರೆ ನನಗೂ ರಮ್ ಬೇಡ, ಅದೇ ಆಗಬಹುದು..!'

★★★




ಮಗಳು: ಮಮ್ಮಿ ನಾನು ಅವನನ್ನು ಮದುವೆ ಆಗುವುದಿಲ್ಲ. ಅವನು ಸ್ವರ್ಗ–ನರಕಗಳಿವೆ ಎಂದರೆ ನಂಬುವದೇ ಇಲ್ಲ.
ತಾಯಿ: ಮೊದಲು ನೀನು ಅವನನ್ನು ಮದುವೆಯಾಗು. ನಂತರ ನಾವಿಬ್ಬರೂ ಸೇರಿ ನರಕ ಇದೆ ಎಂದು ಅವನು ನಂಬುವಂತೆ ಮಾಡೋಣ.

ಸಂಗ್ರಹ: ಮುರಳೀಧರ ಕುಲಕರ್ಣಿ, ಬೀದರ್

